**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10015/2019**

**ಚಾಸಾ ಃ 15**

**ಪ್ರಾಸಾ ಃ 04**

| | | |
|---|---|---|
| **ಹೆಸರು** | **ಃ** | **ಎಂ ಮಹೇಶ** |
| **ತಂದೆಯ ಹೆಸರು** | **ಃ** | **ಮುದ್ದುರಂಗಪ್ಪ** |
| **ವಯಸ್ಸು** | **ಃ** | **36 ವರ್ಷ** |
| **ವೃತ್ತಿ** | **ಃ** | **ಮಗ್ಗದ ಕೆಲಸ** |
| **ವಾಸ** | **ಃ** | **ಕೊಂಗಾಡಿಯಪ್ಪ ಕಾಲೇಜು ಹತ್ತಿರ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 03.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-16 ಕೃಷ್ಣಮೂರ್ತಿ ಗೊತ್ತಿರುತ್ತಾರೆ. ಆರೋಪಿಯನ್ನು ಸಹ ನೋಡಿರುತ್ತೇನೆ. ದಿನಾಂಕಃ 10.01.2019 ರಂದು ಸುಮಾರು ಮದ್ಯಾಹ್ನದ ಸಮಯದಲ್ಲಿ ದೊಡ್ಡಬಳ್ಳಾಪುರ ಗ್ರಾಮಾತಂರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಆಗ ನಾನು ಮತ್ತು ಕೃಷ್ಣಮೂರ್ತಿ ಹೋಗಿದ್ದೇವು. ಅಲ್ಲಿ ಇಂದು ನ್ಯಾಯಾಲಯದಲ್ಲಿ ನಿಂತಿರುವ ಆರೋಪಿಯು ಇದ್ದನು. ಅವನನ್ನು ತೋರಿಸಿದರು. ಸದರಿ ಆರೋಪಿಯು ತಾನು ಬಟ್ಟೆಯನ್ನು ಹಾಜರಪಡಿಸುತ್ತೇನೆಂದು ಹೇಳಿದ್ದರಿಂದ ನಾನು ಕೃಷ್ಣಮೂರ್ತಿ ಮತ್ತು ಪೋಲೀಸರು ಪೋಲೀಸ್ ಜೀಪಿನಲ್ಲಿ ಆರೋಪಿಯೊಂದಿಗೆ ಡಿ ಕ್ರಾಸ್‌ನ ಮುಂಭಾಗದ ಅರ್ಕಾವತಿ ಕೆರೆಗೆ ಕರೆದುಕೊಂಡು ಹೋದನು. ಅಲ್ಲಿ ಆನಂದನು ನೀಲಗಿರಿ ಗಿಡದ ಹತ್ತಿರ ಇಟ್ಟಿದ್ದ ಬ್ಲಾಕ್ ಕಲರ್‌ನ ಸ್ವೇಟರ್, ನೈಟ್ ಪ್ಯಾಂಟ ಮತ್ತು ಒಂದು ಮಚ್ಚನ್ನು ತೋರಿಸಿದನು.

2. ಅಲ್ಲಿ ಪೋಲೀಸರು ಫೋಟೋ ತೆಗೆದುಕೊಂಡಿರುತ್ತಾರೆ. ನಂತರ ಪೋಲೀಸರು ನಮ್ಮನ್ನು ಠಾಣೆಗೆ ವಾಪಸ್ಸು ಕರೆದುಕೊಂಡು ಬಂದು ಅಲ್ಲಿ ಸಹಿ

ಪಡೆದುಕೊಂಡುಕಳುಹಿಸಿರುತ್ತಾರೆ. ಆರೋಪಿಯು ಅಂದು ತೋರಿಸಿದ್ದ ಇಂದು ನ್ಯಾಯಾಲಯದಲ್ಲಿರುವ ಸ್ವೆಟರ್‌ನ್ನು ನೋಡಿ ಗುರುತಿಸುತ್ತೇನೆ. ಅದನ್ನು ಮು.ಮಾ.8 ಎಂದು, ಪ್ಯಾಂಟ್ ನೋಡಿ ಗುರುತಿಸುತ್ತೇನೆ. ಅದನ್ನು ಮು.ಮಾ.9 ಎಂದು ಮತ್ತು ಮಚ್ಚನ್ನು ನೋಡಿ ಗುರುತಿಸುತ್ತೇನೆ. ಅದನ್ನು ಮು.ಮಾ.10 ಎಂದು ಗುರುತಿಸಲಾಯಿತು.

3. ಆರೋಪಿ ಆನಂದನು ದಾಸ ಎಂಬುವವನ್ನು ಕೊಲೆ ಮಾಡಿ ಸದರಿ ಬಟ್ಟೆಗಳನ್ನು ಮತ್ತು ಮಚ್ಚನ್ನು ಅರ್ಕಾವತಿ ಕೆರೆ ಒಳಗಡೆ ಇರುವ ನೀಲಗಿರಿ ಗಿಡದ ಪೋದೆಯಲ್ಲಿ ಅವುಗಳನ್ನು ಇಟ್ಟಿದ್ದನು. ಸದರಿ ಬಟ್ಟೆಗಳು ಆನಂದ್‌ಗೆ ಸಂಬಂಧಪಟ್ಟಿರುತ್ತವೆ. ಸದರಿ ಬಟ್ಟೆಗಳನ್ನು ಮತ್ತು ಮಚ್ಚನ್ನು ಪೋಲೀಸರು ತೆಗೆದುಕೊಂಡು ಕೆರೆಯ ಹತ್ತಿರ ದಾಖಲೆ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ಈಗ ನೊಡುತ್ತಿರುವ ಸಹಿ ನನ್ನದಿರುತ್ತದೆ. ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-20 ಎ ಎಂದು ಗುರುತಿಸಲಾಯಿತು.

4. ಈಗ ನೋಡುತ್ತಿರುವ ಪೋಟೋಗಳು ಕೆರೆಯ ಅಂಗಳದಲ್ಲಿ ಆರೋಪಿತರು ತನ್ನ ಬಟ್ಟೆಗಳನುನ ಅಡಗಿಸಿ ಇಟ್ಟಿದ್ದ ಪೋದೆಯ ಪೋಟೋ ಇರುತ್ತದೆ. . ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-21 ಎಂದು ಗುರುತಿಸಲಾಯಿತು. ಅದೇ ರೀತಿ ಇನ್ನೊಂದು ಕೆಳಗಿನ ಪೋಟೋದಲ್ಲಿ ಆನಂದನು, ಪೋಲೀಸರು, ನಾನು ಮತ್ತುು ಮತೊಬ್ಬ ಸಾಕ್ಷಿದಾರರಾದ ಕೃಷ್ಣಮೂರ್ತಿ ಇರುತ್ತಾರೆ. ಸದರಿ ಪೋಟೋವನ್ನು ಸಾಕ್ಷಿದಾರರ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-22 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಟಿಜಿವಿ ವಕೀಲರವರಿಂದ :</u>**

5. ನನಗೆ ಕನ್ನಡ ಸುಮಾರು ಓದಲು ಬರುತ್ತದೆ. ಆದರೆ ಬರೆಯಲು ಬರುವುದಿಲ್ಲ. ಪ್ರಾಸಾ-1 ಮಂಜುನಾಥರವರು ಇಂದು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಮತ್ತು ಪ್ರಾಸಾ-1 ಸ್ನೇಹಿತರು ಎಂದರೆ ಒಂದೇ ಏರಿಯಾದಲ್ಲಿ ಇರುತ್ತೇವೆ.

6. ದಿನಾಂಕ: 10.01.2019 ರಂದು ನಾನು ಕೃಷ್ಣಮೂರ್ತಿ ಮತ್ತು ಮಂಜುನಾಥ ಮೂರೂ ಜನ ಠಾಣೆಗೆ ಹೋಗಿರುತ್ತೇವೆ ಎಂದರೆ 3-4 ಜನ ಹೋಗಿದ್ದೇವು. ಮಂಜುನಾಥ ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಪೋಲೀಸರು ನನಗೆ ನೋಟೀಸು ನೀಡಿರುವುದಿಲ್ಲ. ನಾನು ಠಾಣೆಗೆ ಹೋಗಿದ್ದ ಸಮಯ ಹೇಳಲುಬರುವುದಿಲ್ಲ ಆದರೆ ಮದ್ಯಾಹ್ನ ಆಗಿತ್ತು. ಆ ದಿನ ಪೋಲೀಸ ಜೀಪಿನಲ್ಲಿ ನಾನು, ಕೃಷ್ಣಮೂರ್ತಿ, ಪೋಲೀಸರು ಮತ್ತು ಆನಂದ ಹೋಗಿರುತ್ತೇವೆ. ಪೋಲೀಸರು ಎಷ್ಟು ಜನ ಇದ್ದರು ಎಂದು ಗೊತ್ತಿರುವುದಿಲ್ಲ. ಪೋಲೀಸು ಜೀಪಿನ ನಂಬರ್ ಹೇಳಲು ಬರುವುದಿಲ್ಲ. ಸ್ಥಳಕ್ಕೆ ಹೋದಾಗ ಎಷ್ಟು ಹೊತ್ತು ಆಗಿತ್ತು ಎಂದು ಹೇಳಲು ಬರುವುದಿಲ್ಲ. ಪೋಲೀಸರು ಜೀಪನ್ನು ಮು.ಮಾ. 8 ರಿಂದ 10 ಇದ್ದ ಸ್ಥಳದ ವರೆಗೆ ಹೋಗಿರುವುದಿಲ್ಲ. ರಸ್ತೆಯ ಮೇಲೆ ನಿಲ್ಲಿಸಿದ್ದರು. ಅಲ್ಲಿಂದ ನಡೆದುಕೊಂಡು ಹೋಗಿರುತ್ತೇವೆ.

7. ಜೀಪು ನಿಲ್ಲಿಸಿದ್ದ ರಸ್ತೆಯಿಂದ ಮು.ಮಾ.8-10 ಇದ್ದ ಸ್ಥಳವು 200-300 ಅಂತರ ಇರುತ್ತದೆ. ಸದರಿ ಜೀಪಿನಿಂದ ಮು.ಮಾ.8-10 ಇದ್ದ ಸ್ಥಳಕ್ಕೆ ಹೋಗುವ ಸಮಯದಲ್ಲಿ ಪೋಲೀಸರಲ್ಲಿ ಯಾವುದೇ ವಸ್ತುಗಳು ಇರಲಿಲ್ಲ. ನಾವು ಜೀಪು ನಿಲ್ಲಿಸಿದ್ದ ಸಳದಿಂದ ಮು.ಮಾ.8-10 ಇದ್ದ ಸ್ಥಳಕ್ಕೆ ಹೋಗುವ ಮೊದಲೆ ಅಲ್ಲಿ ಯಾರೂ ಇರಲಿಲ್ಲ ನಾವು ಮಾತ್ರ ಹೋಗಿರುತ್ತೇವೆ. ಸದರಿ ನಿಪಿ-21 ಮತ್ತು 22 ಫೋಟೋಗಳನ್ನು ಯಾರು ತೆಗೆದಿರುತ್ತಾರೆಂದು ಈಗ ನನಗೆ ನೆನಪಿರುವುದಿಲ್ಲ. ಪೆನ್ನಿನಿಂದ ಬರೆದ ಬರವಣಿಗೆಯನ್ನು ಯಾರು ಬರೆ

ದಿರುತ್ತಾರೆಂದು ಈಗ ನನಗೆ ನೆನಪಿರುವುದಿಲ್ಲ. ಈಗ ನೋಡುತ್ತಿರುವ ಮು.ಮಾ.8 ಜರ್ಕಿನ್ ಇರುತ್ತದೆ.

8. ಮು.ಮಾ.8 ರಿಂದ 10 ಸಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದೆರ ಸರಿ. ನಾನು ಮತ್ತು ಕೃಷ್ಣಮೂರ್ತಿ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ಮು.ಮಾ.8-9 ನ್ನು ಆನಂದ ಹಾಕಿಕೊಂಡಿರುವುದನ್ನು ನಾನು ನೋಡಿರುವುದಿಲ್ಲ. ಓದಿದ್ದು ಜ್ಞಾಪಕ ಇರುವುದಿಲ್ಲ ಅದರೆ ಸಹಿ ಮಾಡಿರುತ್ತೇನೆ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಅಲ್ಲಿ ಮು.ಮಾ.8 ರಿಂದ 10 ನ್ನು ನೋಡಿರುವುದಿಲ್ಲ ಎಂದರೆ ಸಂಯಿಲ್ಲ. ನಾನು ಪೋಲೀಸರ ಮತ್ತು ಸ್ನೇಹಿತನಾದ ಪ್ರಾಸಾ – 1 ರವರ ಮಾತು ಕೇಳಿಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದ ಹೋಗಿದ್ದ ಚೆಕ್ಕುಬಂದಿ ಹೇಳಲು ಬರುವುದಿಲ್ಲ.

**<u>ಮರು ವಿಚಾರಣೆ :</u>**

ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ